ಪಾದಸ್ಪರ್ಶ ಮಾಡಿ ಪಾದರಜವನ್ನು ತನ್ನ ನೆತ್ತಿಗೆ ಹಚ್ಚಿ ವಿನೀತವಾಗಿ ಬಾಗಿ ನಿಂತಳು. 'ಇದು! ಇದು ವಿನಯವೆಂದರೆ!' ಎಂದು ಒಮ್ಮೆ ಅವರ ಮನಸ್ಸು ಹೆಮ್ಮೆಯಿಂದ ಲೊಟ್ಟೆ ಹೊಡೆಯಿತು. ಅವಳ ತಂದೆ ಅಶುತೋಷ್ ಚೌಧರಿ ಕೈ ಜೋಡಿಸಿ 'ನಮಷ್ಕಾರ್' ಎಂದು ಗಟ್ಟಿಯಾಗಿ ಹೇಳಿದವನು, 'ಈ ನನ್ನ ಮಗಳು ನೀವಲ್ಲದೆ ಇನ್ಯಾರ ಬಳಿಯೂ ಅಭ್ಯಾಸ ಬೇಡವೆನ್ನುತ್ತಾಳೆ. ಗ್ವಾಲಿಯರ್ ಘರಾಣದ ಹಾಡುಗಾರಿಕೆಯನ್ನು ತಮ್ಮಿಂದ ಕಲಿತು ಜೀವನ ಸಾರ್ಥಕಪಡಿಸಿಕೊಳ್ಳ ಬೇಕೆನ್ನುತ್ತಾಳೆ. ಹಾಲಲ್ಲಾದರೂ ಹಾಕಿ ನೀರಲ್ಲಾದರೂ ಹಾಕಿ' ಎನ್ನುತ್ತಲೇ... ಗಾಯಕವಾಡರ ಅಂತರಾತ್ಮ ಹೆಮ್ಮೆ ಅಭಿಮಾನಗಳಿಂದ ಉಬ್ಬಿ ಹೋಗುವಂತೆ ಮಾಡಿದ್ದರು. ಗಾಯಕವಾಡರೂ ತಾವೇನು ಕಮ್ಮಿ ಇಲ್ಲದಂತೆ, 'ನಮ್ಮಂಥವರ ಉದ್ದೇಶವೇ ಸಾಧಕರಿಗೆ ಮಾರ್ಗದರ್ಶನ ಮಾಡುವುದು, ನೀನಾ ಇಲ್ಲಿ ಬಾ ನನ್ನ ಬಳಿ ಕುಳಿತುಕೋ ನಿನಗೆ ಏನೆಲ್ಲ ಅಭ್ಯಾಸವಾಗಿದೆ ಹೇಳು' ಎನ್ನಲಾಗಿ, 'ಬನಾರಸಿ ಘರಾಣದ ಠುಮ್ರಿಗಳನ್ನು ಕಲಿತಿರುವೆ. ಕಜ್ರಿ, ಚೈತಿ, ಹೋಲಿ... ಮುಖ್ಯವಾಗಿ ಖ್ಯಾಲ್‌ಗಳನ್ನು ಹಾಡುವೆ' ಎಂದಳು ನಮ್ರವಾಗಿ. ಸೋಫಾದಲ್ಲಿ ಕುಳಿತಿದ್ದ ಅವಳ ತಾಯಿ ಎದ್ದು, 'ಅಯ್ಯೋ... ನಮ್ಮ ನೀನಾ ಅದೆಷ್ಟು ಖ್ಯಾಲ್‌ಗಳನ್ನು, ಠುಮ್ರಿಗಳನ್ನು, ಗ್ರಾಮಫೋನಲ್ಲಿ ಹಾಕಿ ಕೇಳಿದ್ದಾಳೋ... ಕೇಳಿದ್ದನ್ನೇ ಮತ್ತೆ ಮತ್ತೆ ಕೇಳುತ್ತಾಳೆ. ಎಲ್ಲವೂ ನಿಮ್ಮವೆ. ನೀವೆಂದರೆ, ನಿಮ್ಮ ಹಾಡೆಂದರೆ ಜೀವ ಬಿಡುತ್ತೆ ಮಗು' ಎಂದು ಹೇಳುತ್ತ ನಗೆಯಾಡಿದಾಗ... ಆ ವಿದ್ಯಾಕಾಂಕ್ಷಿ ಹುಡುಗಿಯ ಮೇಲೆ ತನಗೆ ಅರಿವಿರದಂತೆ ಒಂದು ಅಭಿಮಾನವು, ಮಮಕಾರವು ಹುಟ್ಟಿಕೊಂಡು ತಾವು ಅದೇ ಮುಂಬಿನಲ್ಲಿ, 'ಸರಿ ಹಾಗಾದರೆ ಒಂದು ಕಜ್ರಿ ಹೇಳು ನೋಡೋಣ' ಎಂದರು. ಅಲ್ಲೇ ಇದ್ದ ತಂಬೂರಿಯನ್ನು ಕೈಗೆತ್ತಿಕೊಂಡು ಶ್ರುತಿ ಸರಿಪಡಿಸಿಕೊಂಡು ಮೆಲು ಆಲಾಪದೊಂದಿಗೆ, 'ಬರ್ಸನ್ ಲಾಗೆ ಬನರಿಯ ಜೂಮ್ ಜೂಮ್ಕೆ' ಎಂದು ಇಂಪಾಗಿ ತನ್ಮಯವಾಗಿ ಹಾಡತೊಡಗಿದಳು. ಹದಿನೈದು ನಿಮಿಷದ ವರೆಗೆ ಬಂದಿಶನ್ನು ವಿಸ್ತರಿಸಿ ಹಾಡುಗಾರಿಕೆ ಮುಗಿಸಿದಳು. ಆ ವರೆಗೆ ಅವಳದೆಷ್ಟು ಪರವಶಳಾಗಿದ್ದಳೆಂದರೆ ಸುತ್ತಲಿನ ಪರಿಸರ, ಗುರುಗಳು ಯಾರೂ ಅವಳಿಗೆ ಖದರಿರಲಿಲ್ಲ. ಗಾಯಕವಾಡರೂ ಅಷ್ಟೇ ಪರವಶರಾಗಿ ತೊಡೆಗೆ ಲಘುವಾಗಿ ತಾಳಹಾಕುತ್ತಾ ಕೇಳಿಸಿಕೊಂಡರು. ಅವಳು ಮುಗಿಸಿ ಮೌನತಾಳಿದಾಗ ಅಭಿಮಾನದಿಂದ ಅವಳತ್ತ ನೋಡಿ, 'ಕಂಠಮಾಧುರ್ಯ ಅಪ್ರತಿಮ! ಮನೋಭಾವವೂ ಚೆನ್ನಾಗಿದೆ. ಆದರೆ... ಗ್ವಾಲಿಯರ್ ಘರಾಣದಲ್ಲಿ ಹಾಡು ನದಿಯೊಂದು ಶಾಂತವಾಗಿ ಪ್ರವಹಿಸುವಂತೆ ಇರಬೇಕು. ಮೀಂಡುಗಳ ನಡುವೆ ಅಂತರ ಸಹಜ, ಸ್ವಾಭಾವಿಕವಾಗಿ ನಿರ್ವಹಿಸಬೇಕು. ಈ ಸಿಗಿತ ಬಿಗಿತಗಳು ಬೇಕಿಲ್ಲ. ಇರಲಿ, ನಾನಾದನ್ನು ನೋಡಿಕೊಳ್ಳುವೆ; ನನ್ನ ವಿದ್ಯಾರ್ಥಿನಿಗೆ ಏನು ಕಲಿಸಬೇಕೆನ್ನುವುದು ನನಗೆ ಗೊತ್ತು' ಎಂದರು ಸ್ನೇಹಪೂರ್ವಕವಾಗಿ. ತಟ್ಟನೆ ಎದ್ದು ಅವರ ಬಳಿಬಂದು ಮತ್ತೆ ಪಾದಸ್ಪರ್ಶ ಮಾಡಿ ಬಿಟ್ಟಳಲ್ಲ!

'ಏಳು... ಆಗಲೇ ಚರಣದೂಳಿಯನ್ನು ಧರಿಸಿದೆಯಲ್ಲ' ಎಂದಾಗ, 'ತಾವು ನನ್ನನ್ನು 'ಶಿಷ್ಯೆಯನ್ನಾಗಿ ಅಂಗೀಕರಿಸಿದ್ದಕ್ಕೆ' ಎನ್ನುತ್ತಾ ಮೇಲೆದ್ದಳು. ಅವಳ ಮುಖ ಹರ್ಷ ಪ್ರಫುಲ್ಲಿತವಾಗಿತ್ತು. ಆಗಲೇ ಅವಳನ್ನವರು ಸರಿಯಾಗಿ ಗಮನಿಸಿದ್ದು. ಗೋಧಿಬಣ್ಣದ ಮಟ್ಟಸ ಎತ್ತರದ ಸಾಧಾರಣ ರೂಪಿನ ಹುಡುಗಿ. 'ಕಣ್ಣುಗಳು ಚುರುಕಾಗಿದೆ. ಪರವಾಗಿಲ್ಲ. ವಿದ್ಯೆಯಲ್ಲಿ ಆಸ್ಥೆ ಇದೆ' ಎನಿಸಿತವರಿಗೆ. ಎಲ್ಲಕ್ಕೂ ಮಿಗಿಲಾಗಿ ಅವರಿಗೆ ಮೆಚ್ಚಿಗೆಯಾದದ್ದು ಅವಳ ಕಂಠಸಿರಿ. ತುಂಬುಗೊರಲಿನಿಂದ ತೆರೆದು ಹಾಡುವ ಶ್ರೀಮಂತಧ್ವನಿ. ಸರಸ್ವತಿಯ ಅನುಗ್ರಹವಿದೆ ಎನಿಸಿತು. ಆನಂತರ ಅವರು ತಂದಿದ್ದ ದೊಡ್ಡ ಹರಿವಾಣ ತುಂಬ ಇಟ್ಟಿದ್ದ ಸೇಬು, ದ್ರಾಕ್ಷಿ, ಬಾಳೆಹಣ್ಣುಗಳು,